ಕರಕೊಂಡು ಬಂದ. ಆಮ್ಯಾಲೆ... ಎಂಟ ದಿವ್ಸಕ್ಕ ಅಪ್ಪ ನಮ್ಮನ್ನೆಲ್ಲಾ ಬಿಟ್ಟು... ಈ ಲೋಕಾನ ಬಿಟ್ಟು.. ಹೋಗೇಬಿಟ್ಟ. ಮಣ್ಣು ಮಾಡೋದು ಎಲ್ಲಾ ಖಾನಾಪುರದಾಗ ಮಾಡಿದ್ವಿ. ಭೈರು ಮಾಮಾನ ಎಲ್ಲಾ ಖರ್ಚು ನೋಡಕೊಂಡ. ಹಳ್ಳಿ ಪದ್ಧತಿಗತೆ ಅವ್ವ ಕುಂಕಮಾ ತಗದ್ಲು. ಗಂಗಾಗ ಏನ ಮಾಡಬೇಕು ಅನ್ನೋದ ತಿಳೀಲಿಲ್ಲ. ಮುಂದ... ಅನ್ನೋ ಧೊಡ್ಡ ಪ್ರಶ್ನಿ ಬಂತು. 'ಇನ್ನೂ ನೌಕರ್ಯಾಗಿದ್ದಾಗನ ತೀರಕೊಂಡಾನ' ಅಂತ ವಾದಾ ಮಾಡಿ ಮಾಮಾ ಅವರಿವರ ಕೈ ಬಿಸಿ ಮಾಡಿ ಕಾಂಪನ್ಸೇಟರಿ ಗ್ರೌಂಡ್ ಮ್ಯಾಲೆ ಕೆಲಸ ಕೊಡಿಸಿದ. ಅಳಕೋತ ಕೂತ ಅವ್ವ ಎದ್ದು ಬಂದು 'ಬಾಳು ಓದಿ ಮುಗಸ್ಲಿ. ಈ ನೌಕರಿಗೆ ಹೋಗೋದು ಬ್ಯಾಡ. ನಾನ ಹೋಗ್ತೇನಿ' ಅಂದ್ಲು. ತುಕಾಗ ಶಿಕ್ಷಣ ಇಲ್ಲದ್ದಕ್ಕ ಬ್ಯಾಡ ಅಂದಬಿಟ್ರು. ಕಡೀಕ ಬೆಳಗಾವ್ಯಾಗ ಸಿವಿಲ್ ಹಾಸ್ಪಿಟಲ್‌ನ್ಯಾಗ ಅವ್ವಗ ಆಯಾನ ಕೆಲಸ ಕೊಟ್ಟರು. ಸಮೀಪನ ಸಣ್ಣ ಮನಿ ಹಿಡದ್ವಿ. ಖಾನಾಪುರದಾಗಿನ ಮನಿ ತಕ್ಕೊಂಡು ಬೆಳಗಾವಿಗೆ ಬಂದ್ವಿ. ಮನಿ ತಗೀಲಿಕ್ಕೆ ಟ್ರಕ್ಕು, ಛಕಡಿ ಏನೂ ಬೇಕಾಗಲಿಲ್ಲ. ಇದ್ದದ್ದ ನಾಕ ಹರಕಾ ಮುರಕಾ ಸಾಮಾನು ಬಸ್ಸಿನ್ಯಾಗ ತೊಗೊಂಡು ಬಂದ್ವಿ. ಬೆಳಗಾವ್ಯಾಗ ಹೊಸಾ ಜೀವನ ಸುರು ಆತು.

ಹೊಸಾ ಊರು, ಹೊಸಾ ಜಾಗ, ಅಪ್ಪ ಇಲ್ಲದಿದ್ದಕ್ಕ ಭಾಳ ಫರಕೇನೂ ಆಗಲಿಲ್ಲ. ಯಾಕಂದ್ರ ಅಂವಾ ಯಾವಾಗೂ ನಮಗ ಆಧಾರ ಆಗಿರ್ಲೇ ಇಲ್ಲ. ಉಲ್ಟಾ ಇನ್ನೂ ಆರಾಮನ ಆತು. ನಮ್ಮವ್ವನ್ನ, ಅವ್ವನಂಥಾ ಹೆಣಮಕ್ಕಳನ್ನ ತಂಪು ಹೊತ್ತಿನ್ಯಾಗ ನೆನಸಬೇಕು. ನಮ್ಮಂಥಾವ್ರ ಮನ್ಯಾಗ ಅವ್ರ ಬದುಕಿನ ಬಂಡಿ ಎಳೀತಾರ. ಕುಡುಕ ಗಂಡನ್ನ ಸಂಭಾಳಿಸಗೋತ. ಗಂಗಾಂದು ಕ್ಷಮಾಗುಣಾನೂ ದೊಡ್ಡದ. ಇಂಥಾವ್ನ ಕ್ಷಮಿಸಿ ಮತ್ತ 'ಅಪ್ಪಾ' ಅಂದ್ಲಲ್ಲ. ಅವ್ವ ಕ್ಷಮಾ ಮಾಡದಿದ್ದರೂ ಮನ್ಯಾಗ ಇಟಗೊಂಡು ಹೊಟ್ಟಿಗೆ ಹಾಕಿದ್ಲು. 'ಅಂವನ್ನೇನು ಕ್ಷಮಾ ಮಾಡೂದು, ಹಲ್ಕಟ್‌ನ್ನ ತಂದು, ಮಗಳ್ನ ನೋಡಿದರ ಹೊಟ್ಟಿ ಉರೀತೈತಿ' ಅನ್ನಾಕಿ. ಅಕಿ ನೌಕರೀನೂ ಸುರುವಾತು. ಎಲ್ಲಾ ಸಮಾ ಮಾಡಿಕೊಟ್ಟು ಭೈರು ಮಾಮಾನೂ ಊರಿಗ್ಹೊಂಟಾ. ತುಕಾಂದೊಂದು ತ್ರಾಸ ಆಗಿತ್ತಲ್ಲ. ಕಲೀಲಿಲ್ಲ. ನೌಕರಿ ಮಾಡಲಿಕ್ಕೆ ಸಿಗತಿದ್ದಿಲ್ಲ. ಇನ್ನ 'ಕೂಲಿ ನಾಲಿ ಮಾಡೋಕಿಂತಾ ನಮ್ಮ ಹೊಲದಾಗ ದುಡಿ ನಡಿ' ಅಂತ ಮಾಮಾ ಕರಕೊಂಡು ಸಾಂಗಲಿಗೆ ಹೋದ. ಗಂಗಾ ಮನಿ ನೋಡಕೊಳ್ಳಿಕ್ಕತ್ಲು. ಅಕಿ ಕೂಸು ರಾಜು ನಮಗ ಆಟಕ್ಕ ಗೊಂಬಿ ಸಿಕ್ಕಂಗಾಗಿತ್ತು. ಇದೆಲ್ಲಾದರ ನಡುವ ನಾನು ಹತ್ತನೇತ್ತಾ ಪಾಸಾಗಿ ಲಿಂಗರಾಜ ಕಾಲೇಜಿಗೆ ಹೋಗಲಿಕ್ಕತ್ತೆ.

ನೀಲೂ ಧೊಡ್ಡ್ಯಾಕಾಗಿದ್ಲು. ಅಕೀದೂ ಸಾಲಿ ನಡದಿತ್ತು. ಗಂಗಾ ಹೊಲಿಗಿ ಕಲತ್ಲು. ಆಜೂ ಬಾಜೂ ಮಂದೀದು ಅರಿವಿ ಹೊಲದ ಕೊಡತಿದ್ಲು. ಸಣ್ಣ ಮಕ್ಕಳ್ನ ಮನ್ಯಾಗಿಟಗೊಂಡು 'ಬೇಬಿ ಸಿಟ್ಟಿಂಗ್' ಮಾಡತಿದ್ಲು. ಆ ಸಣ್ಣ ಮನಿವಳಗ ಹತ್ತ, ಹನ್ನೆರಡು ಹುಡುಗುರು ಕೂಡತಿದ್ರು. ನಾವೆಲ್ಲಾರೂ ಅಕಿಗೆ ಸಾಥ್ ಕೊಡತಿದ್ವಿ. ನೀಲೂನೂ ಕೈಗೂಡಸ್ತಿದ್ಲು. ಹಿಂಗಾಗಿ ಅವ್ವನ ಘಳಕೀಲೆ ನಮ್ಮೆಲ್ಲಾರದೂ ಹೊಟ್ಟಿ ತುಂಬಿದರ ಗಂಗಾಂದು ಉಳದದ್ದಕ್ಕಾಗತಿತ್ತು. ನನ್ನ ಕಾಲೇಜಿನ ಫೀಸು ಅಕಿನ ಕೊಡತಿದ್ಲು. ಕಸೂತಿ ಮಾಡೋದು, ರೇಷಮಿ ಪರಕಾರಕ್ಕ ಛಂದಾಗಿ ಡಿಸೈನ್ ಮಾಡೋದು, ಸೀರಿಗೂ ಮಾಡತಿದ್ಲು. ಪರ್ಸ್ ಹೊಲದು ಕೊಡತಿದ್ಲು. ಅಕಿ ಆಸರಾದ್ಲೇನ ನಾ ಬಿ.ಎ. ಪಾಸಾದೆ. ಯಾರದೋ ವಶೀಲಿ ಹಚ್ಚಿ ಪಿ.ಡಬ್ಲ್ಯೂ.ಡಿ.ವಳಗ ಕೆಲಸ ಸಿಕ್ತು. ನಮ್ಮ ಜೀವನ ಹೊಸಾ ಮಗ್ಗಲಿಗೆ ಹೊರಳಿಕೊಂಡ್ತು.

ಒಂದು ಧೊಡ್ಡ ಸಮಸ್ಯಾ ನಮ್ಮನ್ನೆಲ್ಲಾ ಭಾಳ ದಿವ್ಸದಿಂದ ಕಾಡಲಿಕ್ಕತ್ತಿತ್ತು. ಆಜೂ ಬಾಜೂ